**OS. No. 51/2016** **DW – 1**

ಪ್ರಮಾಣೀಕರಿಸಲಾದ ದಿನಾಂಕಃ **30.07.2026**

<u>ಪಾಟೀ ಸವಾಲು ವಾದಿ ಪರ ಶ್ರೀ **CR** ವಕೀಲರಿಂದಃ</u>

1. ನಾನು 1986 ರಲ್ಲಿ ಜನಿಸಿರುತ್ತೇನೆ. ನನಗೆ ನನ್ನ 12 -13 ವಯಸ್ಸಿನಲ್ಲಿ ತಿಳುವಳಿಕೆ ಬಂದಿರುತ್ತದೆ. ಅದಕ್ಕೂ ಪೂರ್ವದಲ್ಲಿ ಕುಟುಂಬದಲ್ಲಿ ಏನೆಲ್ಲಾ ವ್ಯವಹರಣೆಯಾಗಿರುತ್ತದೆ ಎಂದು ಖುದ್ದು ಮಾಹಿತಿ ಇಲ್ಲ ಎಂದರೆ ಸ್ವಲ್ಪ ಸ್ವಲ್ಪ ಇರುತ್ತದೆ. ಅದಕ್ಕೂ ಹಿಂದಿನ ವ್ಯವಹರಣೆಗಳಲ್ಲಿ ನಾನು ಭಾಗವಹಿಸಿರುವುದಿಲ್ಲ. ಗಂಗಣ್ಣ ನನ್ನ ತಾತ. ಅವರು ಒಬ್ಬ ತಮ್ಮ ಇದ್ದರು. ಅವರು ಹೆಸರು ನಾಗಣ್ಣ. ನಾಗಣ್ಣರವರ ಹೆಂಡತಿ ಹೆಸರು ರಂಗಮ್ಮ. ನಾಗಣ್ಣ ಮತ್ತು ಗಂಗಣ್ಣನ ನಡುವೆ ಕುಟುಂಬದ ಆಸ್ತಿಗಳು ಭಾಗ ಆಗಿರುವುದಿಲ್ಲ. ಅವರಿಬ್ಬರು ಬೇರೆ ಬೇರೆ ಮನೆಯಲ್ಲಿ ವಾಸವಿದ್ದರು. ನಾಗಣ್ಣರವರಿಗೆ ಮಕ್ಕಳು ಇರಲಿಲ್ಲ. ನಾಗಣ್ಣ ಮೊದಲು ಮೃತಪಟ್ಟಿರುತ್ತಾರೆ.ನಾಗಣ್ಣ ಮೃತಪಟ್ಟನಂತರ ಆತನ ಹೆಂಡತಿ ರಂಗಮ್ಮ ನಮ್ಮ ತಾತ ಗಂಗಣ್ಣರವರ ಕುಟುಂಬದೊಡನೆಯೇ ಇದ್ದರು ಎಂದರೆ ಸಾಕ್ಷಿಯು ಗಂಗಣ್ಣನ ಮಗನನ್ನು ರಂಗಮ್ಮ ದತ್ತು ತೆಗೆದುಕೊಂಡಿದ್ದರು ಎಂದು ನುಡಿದಿರುತ್ತಾರೆ. ಗಂಗಣ್ಣನ ಹಿರಿಯ ಮಗ ಸಿದ್ದಪ್ಪನನ್ನು ದತ್ತುಪಡೆದುಕೊಂಡಿದ್ದರು. ಸದರಿ ಸಿದ್ದಪ್ಪ ನನ್ನ ತಂದೆ 1 ನೇ ಪ್ರತಿವಾದಿಯಾಗಿರುತ್ತಾರೆ. ದತ್ತು ಸ್ವೀಕಾರ ಆದ ಬಗ್ಗೆ ದಾಖಲೆಯಾಗಿರುವುದಿಲ್ಲ. ಗಂಗಣ್ಣನಿಗೆ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳೆಂದರೆ ಸಿದ್ದಪ್ಪ, ತಮ್ಮಯ್ಯಣ್ಣ, ಶಂಕ್ರಮ್ಮ, ಲಕ್ಷ್ಮಮ್ಮ, ರಾಮಣ್ಣ. ರಾಮಣ್ಣ ಮೃತ ಪಟ್ಟಿದ್ದು ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಒಬ್ಬ ಹೆಣ್ಣು ಮಗಳು ಚಿಕ್ಕವಯಸ್ಸಿನಲ್ಲಿಯೆ ಮೃತಪಟ್ಟಿದ್ದು ಉಮೇಶ್ ಎನ್ನುವ ಒಬ್ಬ ಗಂಡು ಮಗ ಇರುತ್ತಾನೆ.
2. ನನ್ನ ತಂದೆ ಸಿದ್ದಪ್ಪ ಕೂಲಿ ಕೆಲಸ ಮಾಡುತ್ತಿದ್ದರು. ವಾದಿ ತಮ್ಮಯ್ಯನವರು ಕೆ.ಇ.ಬಿಯಲ್ಲಿ ಕೆಲಸ ಮಾಡುತ್ತಿದ್ದರು. ವಾದಿ ಮತ್ತು 1 ನೇ ಪ್ರತಿವಾದಿ ಮತ್ತು 2 ರಿಂದ 6 ನೇ ಪ್ರತಿವಾದಿಯರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ. ನಮ್ಮ ಕುಟುಂಬದಲ್ಲಿ ವಾದಿಯೇ ಆರ್ಥಿಕವಾಗಿ ಸಬಲರಾಗಿದ್ದು ಕುಟುಂಬದ ವ್ಯವಹಾರ ನಡೆಸುತ್ತಿದ್ದರು ಎಂದರೆ ನಮ್ಮ ಅಜ್ಜಿ ಬಾಲಮ್ಮರವರು ವ್ಯವಹಾರ ನಡೆಸುತ್ತಿದ್ದರು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯು ಬಾಲಮ್ಮರವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ, ಒಂದು ಮನೆ ಹಾಗೂ ನಿವೇಶನವನ್ನು ಹೊರತುಪಡಿಸಿ. ಬಾಲಮ್ಮನವರು ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ. ಯಾರಿಂದ ಖರೀದಿ ಮಾಡಿರುತ್ತಾರೆ

ಎಂದು ಗೊತ್ತಿಲ್ಲ. ಎಷ್ಟು ಹಣಕ್ಕೆ ಖರೀದಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಬಾಲಮ್ಮ ಹಾಲಿನ ವ್ಯಾಪಾರ ನಡೆಸಿ ಬಡ್ಡಿ ವ್ಯವಹಾರ ಮಾಡಿಕೊಂಡು ಇದ್ದರು. ರಂಗಮ್ಮನವರು ಹಾಲಿನ ವ್ಯವಹಾರ ಮಾಡಿಕೊಂಡು ಬ್ಯಾಸಾಯ ಮಾಡುತ್ತಿದ್ದರು. ಬಾಲಮ್ಮನಾಗಲೀ ಅಥವಾ ರಂಗಮ್ಮನಾಗಲೀ ಯಾವ ವ್ಯವಹಾರವನ್ನು ಮಾಡುತ್ತಿರಲ್ಲಿಲ್ಲ ಮನೆ ಕೆಲಸ ನೋಡಿಕೊಂಡು ಇದ್ದರು ಎಂದರೆ ಸರಿಯಲ್ಲ. ವಾದಿಯು ನೌಕರಿಯಿಂದ ಬಂದ ಹಣದಲ್ಲಿ ಸದರಿ ಆಸ್ತಿಗಳನ್ನು ಒಟ್ಟು ಕುಟುಂಬದ ಪರವಾಗಿ ಅವರ ತಾಯಿ ಹಾಗೂ ಚಿಕ್ಕಮ್ಮ ರಂಗಮ್ಮನವರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ಐಟಂ ನಂ. 6 ಆಸ್ತಿಯನ್ನು ಸಹ ವಾದಿಯೇ ಹಣ ನೀಡಿ ನನ್ನ ತಂದೆ 1 ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ . ನನ್ನ ತಂದೆ ಕೂಲಿ ಮಾಡುತ್ತಿದ್ದ ಕಾರಣ ಅವರಿಗೆ ಖರೀದಿ ಮಾಡುವ ಶಕ್ತಿ ಇರಲಿಲ್ಲ ಎಂದರೆ ಅವರು ಸಾಲ ಮಾಡಿ ನನ್ನನ್ನು ನಾಲ್ಕು ವರ್ಷ ಸಂಬಳಕ್ಕೆ ಇಟ್ಟು ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಎಲ್ಲಾ ಆಸ್ತಿಗಳನ್ನು ಒಟ್ಟು ಕುಟುಂಬದ ಆಸ್ತಿಗಳಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ.

4. ಐಟಂ ನಂ. 2 ಮತ್ತು 3 ರ ಆಸ್ತಿಯು ಯಾರು ಖರೀದಿ ಮಾಡಿರುತ್ತಾರೆ ಎಂದರೆ 1 ನೇ ಪ್ರತಿವಾದಿ ಆ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಮಾಡಿಕೊಂಡಿದ್ದು ಅದು ರದ್ದು ಆಗಿ ಅದರ ಮೂಲ ಒಡೆಯರಾದ ಶ್ರೀನಿವಾಸಯ್ಯ ಮತ್ತು ರಾಮಚಂದ್ರಯ್ಯರವರ ಹೆಸರಿಗೆ ಹೋಗಿರುತ್ತದೆ. ಸದರಿ ಆಸ್ತಿಯ ಖಾತೆ ಸಹ ನನ್ನ ತಂದೆಯ ಹೆಸರಿಗೆ ಆಗಿತ್ತು ಆದರೆ ಕಳೆದ 2 ವರ್ಷದ ಹಿಂದೆ ರದ್ದಾಗಿರುತ್ತದೆ ಎಂದು ನುಡಿದಿರುತ್ತಾರೆ. ಆ ರೀತಿ ರದ್ದಾಗಿದೆ ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಅದು ಏನು ದಾಖಲೆ ಎಂದು ನನಗೆ ಗೊತ್ತಿಲ್ಲ ನನಗೆ ಓದು ಬರಹ ಬರುವುದಿಲ್ಲ. ನಾನು ಏನೆಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ತಿಳಿದುಕೊಂಡಿರುತ್ತೇನೆ. ಸದರಿ ಆಸ್ತಿಗಳನ್ನು ವಾದಿ ಹಣ ನೀಡಿ ನನ್ನ ತಂದೆ 1 ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಸಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಸದರಿ ಕ್ರಯದ ಕರಾರಿನ ಮೇಲೆ ದಾವೆ ದಾಖಲು ಮಾಡಿದ್ದು ಅದು ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ದಾವೆಯ ನಂತರ ನಮ್ಮ ಪರವಾಗಿ ಯಾವುದೇ ಅಂತಿಮ ತೀರ್ಮಾನ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರಿಗೆ ಖಾತೆಯಾಗಿತ್ತು ಆದರೆ ಅದು ವಜಾಗೊಂಡಿರುತ್ತದೆ. ಆ ರೀತಿ ಖಾತೆ ವಜಾಗೊಂಡಿರುವುದಿಲ್ಲ ನಂತರ ನಾನು, ನಮ್ಮ ತಂದೆ ತಂಗಿ ಸೇರಿ ವಿಭಾಗ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ ಕ್ರಯದಕರಾರು ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲಾಗಿತ್ತು ಆದರೆ ಅದು ಈಗ ವಜಾಗೊಂಡಿರುತ್ತದೆ.

5. ಸರ್ವೆ ನಂ. 8/1 ಹಾಗೂ 8/2 ಸಿ ರಲ್ಲಿ ಪಹಣಿ ನಮ್ಮ ಹೆಸರಿನಲ್ಲಿ ಇತ್ತು ಎಂದರೆ ಮೊದಲು ಇತ್ತು ಅದರೆ ಈ ವಜಾಗೊಂಡಿರುತ್ತದೆ. ಈಗಲೂ ಸದರಿ ಆಸ್ತಿ ನಮ್ಮ ಹೆಸರಿನಲ್ಲಿಯೇ ಇರುತ್ತದೆ ಬೇರೆಯಾರಿಗೆ ಆಸ್ತಿ ಕೊಡಬೇಕಾಗುತ್ತದೆ ಎಂದು ಸುಳ್ಳು ವಾದ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.
6. ರಂಗಮ್ಮನವರು ಮೃತಪಟ್ಟಾಗ ಅವರಿಗೆ 80 ಅಥವಾ 85 ವರ್ಷ ವಯಸ್ಸಾಗಿರಬಹುದು. ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಯಾವ ವರ್ಷದಲ್ಲಿ ಮೃತಪಟ್ಟಿರುತ್ತಾರೆ ಎಂದು ನೆನಪಿಲ್ಲ ಮೃತಪಟ್ಟು 30 ವರ್ಷವಾಗಿರುತ್ತದೆ. ಅವರ ಮರಣ ಪ್ರಮಾಣ ಪತ್ರ ನಮ್ಮ ಬಳಿ ಇರುವುದಿಲ್ಲ ಅವರ ಹೆಸರಿನಲ್ಲಿ ಇದ್ದ ಖಾತೆಯನ್ನು 1 ನೇ ಪ್ರತಿವಾದಿಯ ಹೆಸರಿಗೆ ಬದಲಾಯಿಸಿಕೊಳ್ಳಲಾಗಿದೆ ಎಂದರೆ ವಿಲ್ ಮೂಲಕ ಬದಲಾವಣೆಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಅವರಿಗೆ ವಿಲ್ ಮಾಡುವ ಆರೋಗ್ಯ ಅಥವಾ ಮಾನಸೀಕ ಸ್ಥಿತಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅವರಿಗೆ ಯಾವುದು ಸರಿ ಯಾವುದು ತಪ್ಪು ಎಂದು ನಿರ್ಧರಿಸುವ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯು ಹಣ ನೀಡಿ ಅವರ ತಾಯಿಯ ಹೆಸರಿ ಖರೀದಿ ಮಾಡಿದ್ದು ರಂಗಮ್ಮನವರಿಗೆ ಅವರಿಗೆ ವಿಲ್ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯು ತಮ್ಮ ನೌಕರಿ ನಿಮಿತ್ತ ಹೊರಗಡೆ ಇದ್ದು ಆ ಸಮಯವನ್ನು ದುರುಪಯೋಗಪಡಿಸಿಕೊಂಡು ರಂಗಮ್ಮರವರಿಂದ ವಿಲ್‌ಅನ್ನು ಸೃಷ್ಟಣೆ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಆಸ್ತಿಯನ್ನು ಖರೀದಿಸುವ ಯಾವುದೇ ಶಕ್ತಿ ಇರಲಿಲ್ಲ ವಾದಿಯೇ ಹಣವನ್ನು ನೀಡಿ ನನ್ನ ತಂದೆಯಹೆಸರಿಗೆ ನಾಮಕಾವಸ್ತೆ ಕ್ರಯ ಮಾಡಲಾಗಿತ್ತು ಎಂದರೆ ಸರಿಯಲ್ಲ. ರಂಗಮ್ಮನವರು ಆ ಸಮಯದಲ್ಲಿ ಬೇರೆಯವರ ಸಹಾಯ ಇಲ್ಲದೇ ಓಡಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಿಲ್ ಅನ್ನು ಯಾರ ಬಳಿ ಬರೆಸಲಾಗಿದೆ ಎಂದರೆ ಗೊತ್ತಿಲ್ಲ ನಾನು ಹೋಗಿರುವುದಿಲ್ಲ. ಸದರಿ ವಿಲ್ ಮನೆಯ ಪಟ್ಟಿಗೆಯಲ್ಲಿ ಇತ್ತು. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿ ಎಲ್ಲರೂ ಅನುಭವಿಸುತ್ತಿದ್ದು ವಾದಿಗೂ ಸಹ ಪಾಲಿನ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿಸಿಕೊಂಡು ದಾವಾ ಆಸ್ತಿ ನಮ್ಮದು ಎಂದು ಸುಳ್ಳು ವಾದ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ,